ಸಿನಿ

# ಹನಿ



## ಮತ್ತೆ ಮಕ್ಕಳು ಬರುತ್ತಿದ್ದಾರೆ...

**ಕೂ**ಡ್ಲು ರಾಮಕೃಷ್ಣ ನಿರ್ದೇಶನದ ಮಕ್ಕಳ ಚಿತ್ರ ಬೆಟ್ಟದ ಪುರದ ದಿಟ್ಟ ಮಕ್ಕಳು ಇದೇ ವಾರ ಮೈಸೂರು ಸುತ್ತಮುತ್ತ ಬಿಡುಗಡೆಯಾಗಲಿದೆ. ಈಗಾಗಲೇ ತಿಂಗಳ ಹಿಂದೆ ಬೆಂಗಳೂರಿನ ಪಿವಿಆರ್‌ನಲ್ಲಿ ಬಿಡುಗಡೆಯಾಗಿತ್ತು. ಪುಟ್ಟ ಮಕ್ಕಳು ಗಣಿಗಾರಿಕೆ ವಿರುದ್ಧ ತಿರುಗಿ ಬಿದ್ದು, ಹೇಗೆ ತಮ್ಮ ಊರನ್ನು, ಪರಿಸರವನ್ನು ಕಾಪಾಡುತ್ತಾರೆ ಎನ್ನುವ ಕಥಾ ಹಂದರವುಳ್ಳ ಈ ಚಿತ್ರವನ್ನು ಅನಿವಾಸಿ ಭಾರತೀಯ ಹರ್ಷಾ ರಾಮ್ ನಿರ್ಮಿಸಿದ್ದಾರೆ.

ಚಿತ್ರದಲ್ಲಿ ಕರಿಬಸವಯ್ಯ, ಶ್ರೀನಿವಾಸ ಮೂರ್ತಿ, ಶೋಭರಾಜ್, ಶಂಖನಾದ ಅರವಿಂದ್ ಸೇರಿದಂತೆ ಹತ್ತಾರು ಬಾಲ ಪ್ರತಿಭೆಗಳಿದ್ದಾರೆ. ಮೊದಲ ಹಂತದಲ್ಲಿ ಚಿತ್ರಮಂದಿರ ಸಮಸ್ಯೆಯಿಂದಾಗಿ ಹೊರಜಿಲ್ಲೆಗಳಲ್ಲಿ ಬಿಡುಗಡೆ ಸಾಧ್ಯವಾಗಲಿಲ್ಲ. ಹಾಗಾಗಿ ಹಂತ ಹಂತವಾಗಿ ಜಿಲ್ಲಾದ್ಯಂತ ರಿಲೀಸ್ ಮಾಡುತ್ತಿದ್ದೇವೆ. ಇನ್ನು ಎರಡು ವಾರಗಳಲ್ಲಿ ಮಂಡ್ಯ, ದಾವಣಗೆರೆ ಮೊದಲಾದೆಡೆ ಬಿಡುಗಡೆ ಮಾಡುತ್ತೇವೆ ಎನ್ನುತ್ತಾರೆ ಹರ್ಷಾ ರಾಮ್. ಅಷ್ಟೇ ಅಲ್ಲ, ನವೆಂಬರ್ ಮೊದಲ ವಾರದಲ್ಲಿ ಬೆಂಗಳೂರಿನಲ್ಲಿ ಮತ್ತೊಮ್ಮೆ ತೆರೆ ಕಾಣಿಸುತ್ತೇವೆ. ತಿಂಗಳ ಹಿಂದೆ ಹತ್ತಾರು ಚಿತ್ರಗಳ ಭರಾಟೆ ಇದ್ದ ಕಾರಣ ನಮ್ಮ ಚಿತ್ರ ತೆರೆಕಂಡ ವಿಷಯ ಹೆಚ್ಚು ಮಂದಿಗೆ ಗೊತ್ತಾಗಿಲ್ಲ. ಹಾಗಾಗಿ ಹೀಗೆ ಎನ್ನುತ್ತಾರೆ ಹರ್ಷಾ.

ಅದೇನೇ ಇರಲಿ, ಒಂದು ಚಿತ್ರವನ್ನು ಬೆಂಗಳೂರಿನಂಥ ಬೆಂಗಳೂರಲ್ಲೇ ಇದ್ದು ಬಿಡುಗಡೆ ಮಾಡುವುದು ಕಷ್ಟ. ಹೀಗಿದ್ದೂ ವಿದೇಶದಲ್ಲಿ ಇದ್ದು, ಬಿಡುವಿನ ಅವಧಿಯಲ್ಲಿ ಇಲ್ಲಿಗೆ ಬಂದು, ತಾವೇ ಓಡಾಡಿ, ಕನ್ನಡ ಚಿತ್ರವೊಂದನ್ನು ಬಿಡುಗಡೆ ಮಾಡುತ್ತಿರುವ ಹರ್ಷ ಅವರ ಕೆಲಸವನ್ನು ಮೆಚ್ಚಲೇ ಬೇಕು. ಅಲ್ಲದೇ ವಿದೇಶದಲ್ಲಿನ ಕನ್ನಡ ಸಂಘಟನೆಗಳು ಸೇರಿ ಈ ಚಿತ್ರದ ಪ್ರದರ್ಶನವನ್ನು ಏರ್ಪಡಿಸಿ, ಒಂದಷ್ಟು ಚರ್ಚೆ, ಸಂವಾದ ನಡೆಸುತ್ತೇವೆ.